# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀಮತಿ ಮಂಗಳ ನಾಯಕ, ಮಾಜಿ ಅಧ್ಯಕ್ಷರು, ಶೆಟಗೇರಿ ಗ್ರಾಮ ಪಂಚಾಯಿತಿ, ಅಂಕೋಲಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 38 ಗ್ರಾಪಂಕಾ 2020 (ಭಾ-1),ದಿ: 04.03.2020.
2. ಮಾನ್ಯ ಕರ್ನಾಟಕ ಉಪಲೋಕಾಯುಕ್ತ ರವರ ಪತ್ರ ಸಂಖ್ಯೆ: ಕಂಪ್ಲೇಟ್ / ಉಪಲೋಕ್ /ಬಿಜಿಎಂ/1748/2018/ಎಆರ್ಇ-6, ದಿ:02.01.2020.
3. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 1135 ಗ್ರಾಪಂಅ 2018, ದಿನಾಂಕ:02.02.2019.
4. ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ರವರ ಪತ್ರ ಸಂ.ಪ್ರಾಆಬೆ:ಜಿಪಂ: 43(ಎ): ಸಿಆರ್-02:2020-2021, ದಿನಾಂಕ: 16.06.2020.
5. ಸರ್ಕಾರದ ಇದೇ ಸಮ ಸಂಖ್ಯೆಯ 2ನೇ ಕಾರಣ ಕೇಳುವ ನೋಟೀಸು ದಿ:28.09.2020.
6. ಶ್ರೀಮತಿ ಮಂಗಳ ನಾಯಕ. ಮಾಜಿ ಅಧ್ಯಕ್ಷರು, ಶೆಟಗೇರಿ ಗ್ರಾಮ ಪಂಚಾಯಿತಿ, ಅಂಕೋಲಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರು ಕಾರಣ ಕೇಳುವ ನೊಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ: 24.11.2020.

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ಪತ್ರದಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 12(1) ಮತ್ತು 12(3) ರನ್ವಯ ಮಾನ್ಯ ಲೋಕಾಯುಕ್ತ ರವರು ಸಲ್ಲಿಸಿರುವ ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ವರದಿರನ್ವಯ ಉತ್ತರ ಕನ್ನಡ ಜಿಲ್ಲೆ, ಅಂಕೋಲಾ ತಾಲ್ಲೂಕಿನ ಶೆಟಗೇರಿ ಗ್ರಾಮ ಪಂಚಾಯಿತಿಯಲ್ಲಿ ನರೇಗಾ ಯೋಜನೆಯಡಿ ಆಟದ ಮೈದಾನ ಕಾಮಗಾರಿಯಲ್ಲಿ ನಡೆದ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಶೆಟಗೇರಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀ ಶಶಿಧರ ನಾಯಕ ಮತ್ತು ಮಾಜಿ ಅಧ್ಯಕ್ಷರಾದ ಶ್ರೀಮತಿ ಮಂಗಳ ನಾಯಕ, ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ರನ್ವಯ ನಿಯಮಾನುಸಾರ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಪ್ರಾದೇಶಿಕ ಆಯುಕ್ತರು, ಬೆಳಗಾವಿ ರವರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಸರ್ಕಾರದ ಆದೇಶದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43-ಎ ರಡಿ ಗ್ರಾಮ ಪಂಚಾಯಿತಿ ಸದಸ್ಯರುಗಳು, ಪ್ರಕರಣ 48(4) ಮತ್ತು 48(5) ರಡಿ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರುಗಳ ಮೇಲೆ ದುರ್ವತನೆ, ಅಧಿಕಾರ ಮತ್ತು ಹಣ ದುರುಪಯೋಗಪಡಿಸಿಕೊಂಡ ಆರೋಪಗಳಿಗೆ ಸಂಬಂಧಿಸಿದಂತೆ ಕ್ರಮ ಕೈಗೊಳ್ಳುವ ಸಲುವಾಗಿ ವಿಚಾರಣೆ ನಡೆಸುವ ಅಧಿಕಾರವನ್ನು ಪ್ರಾದೇಶಿಕ ಆಯುಕ್ತರುಗಳಿಗೆ ವಹಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ ರವರು ಪತ್ರ ಸಂಖ್ಯೆ:ಪ್ರಾಆಬೆ:ಜಿಪಂ: 43(ಎ): ಸಿಆರ್-02:2020-2021, ದಿನಾಂಕ:16.06.2020 ರಲ್ಲಿ ನೀಡಿರುವ ವಿಚಾರಣಾ ವರದಿಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಶೆಟಗೇರಿ ಗ್ರಾಮ ಪಂಚಾಯಿತಿಯ ಚುನಾಯಿತ ಪ್ರತಿನಿಧಿಗಳಾದ ಶ್ರೀ ಶಶಿಧರ ನಾಯಕ ಮತ್ತು ಶ್ರೀಮತಿ ಮಂಗಳ ನಾಯಕ, ಅಧ್ಯಕ್ಷರು, ಶೆಟಗೇರಿ ಗ್ರಾಮ ಪಂಚಾಯತ್ ಇವರು ನರೇಗಾ ಯೋಜನೆಯಡಿ ಆಟದ ಮೈದಾನ ಕಾಮಗಾರಿಯಲ್ಲಿ ನಡೆದ ಅವ್ಯವಹಾರದಲ್ಲಿ ಭಾಗಿಯಾಗಿರುವುದಾಗಿ ಮಾಡಲಾದ ಆರೋಪಗಳ ವಿಚಾರಣೆಯನ್ನು ಜರುಗಿಸಲಾಗಿದ್ದು, ವಿಚಾರಣೆ ಕಾಲಕ್ಕೆ ಕಂಡುಬಂದ ಅಂಶಗಳನ್ವಯ, 1) ಪ್ರಸ್ತಾಪಿತ ಕಾಮಗಾರಿಗಾಗಿ ವಸ್ತುಗಳನ್ನು ಪೂರೈಸುವ ಕುರಿತು ಅಂದಾಜು ಪಟ್ಟಿಯನ್ನು ಸಲ್ಲಿಸಿದ ವ್ಯಕ್ತಿಗಳ ವಿರುದ್ಧ ಮೋಸ, ವಂಚನೆ ಹಾಗೂ ಸುಳ್ಳು ದಾಖಲೆ ಸೃಷ್ಟಿಸಿರುವುದಕ್ಕೆ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಲು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಅಂಕೋಲಾ ರವರಿಗೆ ಸೂಚಿಸಲಾಯಿತು. 2) ಎದುರುದಾರ-2 ಆದ ಶ್ರೀಮತಿ ಮಂಗಳ ನಾಯಕ ಇವರು ಕಛೇರಿಯನ್ನು ತೊರೆದು ಹೋಗಿರುವುದರಿಂದ ಸದರಿಯವರ ವಿರುದ್ಧ ಕ್ರಮ ಕೈಗೊಳ್ಳುವುದು ನಿರರ್ಥಕವಾಗಿರುತ್ತದೆ ಎಂದು ಕಂಡುಕೊಳ್ಳಲಾಯಿತು. 3) ಎದುರುದಾರ-1 ಆದ ಶ್ರೀ ಶಶಿಧರ ನಾಯಕ ಇವರ ವಿರುದ್ಧ ಆರೋಪಗಳು ಸಾಬೀತಾಗಿರುವುದಿಲ್ಲ. ಆದ್ದರಿಂದ, ಎದುರುದಾರರಾದ ಶ್ರೀ ಶಿಶಧರ ನಾಯಕ, ಅಧ್ಯಕ್ಷರು ಶೆಟಗೇರಿ ಗ್ರಾಮ ಪಂಚಾಯತ್ ಇವರ ಸದಸ್ಯತ್ವವನ್ನು ಮುಂದುವರೆಸಬಹುದಾಗಿದೆ ಎಂದು ಶಿಫಾರಸ್ಸು ಮಾಡಿರುತ್ತಾರೆ.

ಮುಂದುವರೆದು, ವರದಿಯಲ್ಲಿ ಎದುರುದಾರ-1 ಆದ ಶ್ರೀ ಶಶಿಧರ ನಾಯಕ, ಅಧ್ಯಕ್ಷರು, ಶೆಟಗೇರಿ ಗ್ರಾಮ ಪಂಚಾಯಿತಿ, ಅಂಕೋಲಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಕಾರಣ ಕೇಳುವ ನೋಟೀಸ್ ನೀಡಿ ಅವರಿಂದ ಸಮಜಾಯಿಷಿಯನ್ನು ಕೋರಲಾಗಿತ್ತು. ಅದರಂತೆ ಸಮಜಾಯಿಷಿ ನೀಡಿರುತ್ತಾರೆ. ಪಂಚಾಯತಿ ವ್ಯಾಪ್ತಿಯ ಕಾಮಗಾರಿಗಳನ್ನು ಕೈಗೊಳ್ಳಲು ಕಾಂಟ್ರಾಕ್ಟರ್‌ಗಳನ್ನು ಆಯ್ಕೆ ಮಾಡುವಲ್ಲಿ ನನ್ನ ಪಾತ್ರವೇನು ಇರುವುದಿಲ್ಲ. ತಾನು ಅಂತಿಮ ಪಾವತಿಯನ್ನು ಮಾತ್ರ ಮಾಡಿರುವುದಾಗಿ ಹಾಗೂ ತಾನು ಕಾಮಗಾರಿಯು ಪೂರ್ಣಗೊಂಡ ನಂತರ ಮೈದಾನವನ್ನು ಪರಿಶೀಲಿಸಿ, ತದನಂತರವೇ ಕಾಮಗಾರಿಯ ಕುರಿತಂತೆ ಪಾವತಿಯನ್ನು ಮಾಡಿದ್ದಾಗಿ ಹಾಗೂ ಆ ಸಮಯದಲ್ಲಿ ಕಾಮಗಾರಿಯು ಉತ್ತಮ ಗುಣಮಟ್ಟದ್ದಾಗಿತ್ತು ಎಂದು ಹೇಳಿಕೆಯನ್ನು ನೀಡಿರುತ್ತಾರೆ.

ಪ್ರಕರಣದ ವಿಚಾರಣೆಯಲ್ಲಿ ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹಾಜರಾಗಿ ಮಾನ್ಯ ಲೋಕಾಯುಕ್ತ ಇವರಲ್ಲಿ ದೂರನ್ನು ನೀಡಿದ ವ್ಯಕ್ತಿಗೆ ಪದೇ ಪದೇ ಸುಳ್ಳು ದೂರುಗಳನ್ನು ನೀಡುವುದು ಹವ್ಯಾಸವಾಗಿರುವುದಾಗಿ ಹಾಗೂ ತಾನು ಶೇಟಗೇರಿ ಗ್ರಾಮ ಪಂಚಾಯಿತಿಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಎಂದು ಕೆಲಸಕ್ಕೆ ಹಾಜರಾಗುವ ಸಮಯದಲ್ಲಿ ಸದರಿ ಕಾಮಗಾರಿಯು ಬಹುತೇಕ ಪೂರ್ಣಗೊಂಡಿರುವುದಾಗಿ ತಮ್ಮ ಹೇಳಿಕೆಯನ್ನು ನೀಡಿರುತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (5) ರಲ್ಲಿ ಶ್ರೀಮತಿ ಮಂಗಳ ನಾಯಕ, ಮಾಜಿ ಅಧ್ಯಕ್ಷರು, ಶೆಟಗೇರಿ ಗ್ರಾಮ ಪಂಚಾಯಿತಿ, ಅಂಕೋಲಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ರವರಿಗೆ ದಿನಾಂಕ: 28.09.2020 ರಂದು ಕಾರಣ ಕೇಳುವ ನೋಟೀಸ್ ನೀಡಿ ಅವರಿಂದ ಸಮಜಾಯಿಷಿಯನ್ನು ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (6) ರಲ್ಲಿ ಮಂಗಳ ನಾಯಕ, ಮಾಜಿ ಅಧ್ಯಕ್ಷರು, ಶೆಟಗೇರಿ ಗ್ರಾಮ ಪಂಚಾಯಿತಿ ರವರು ಲಿಖಿತ ಸಮಜಾಯಿಷಿ ಈ ಕೆಳಕಂಡಂತೆ ನೀಡಿರುತ್ತಾರೆ.

- ನಾನು ಗ್ರಾಮ ಪಂಚಾಯಿತಿಯ ಅಧ್ಯಕ್ಷೆಯಾಗಿ ಕಾರ್ಯನಿರ್ವಾಹಿಸಿರುವ ಸಂದರ್ಭದಲ್ಲಿ ಅಧ್ಯಕ್ಷತೆ ವಹಿಸಿ ನಡೆಸಿದಂತಹ ಸಭೆಯಲ್ಲಿ ಎಲ್ಲಾ ನಿರ್ಣಯಗಳನ್ನು ಸಭೆಯ ಒಪ್ಪಿಗೆ ಮೇರೆಗೆ ಮತ್ತು ಸದ್ರಿ ಕಾಮಗಾರಿಗಳನ್ನು ಸಹ ಗ್ರಾಮಸಭೆಯ ಒಪ್ಪಿಗೆ ಮೇರೆಗೆ ತೆಗೆದುಕೊಳ್ಳಲಾಗಿದೆ.
- ಗ್ರಾಮ ಪಂಚಾಯಿತಿ ಅಧ್ಯಕ್ಷೆಯಾಗಿ ಗ್ರಾಮಗಳ ಸಮಗ್ರ ಅಭಿವೃದ್ಧಿ ಹಾಗೂ ಉದ್ಯೋಗಖಾತ್ರಿ ಯೋಜನೆಯಡಿ ಉದ್ಯೋಗ ಕೋರಿ ಅರ್ಜಿ ಸಲ್ಲಿಸಿದವರಿಗೆ ಉದ್ಯೋಗ ಕಲ್ಪಿಸುವುದು ಹಾಗೂ ಇವುಗಳಿಗೆ ಸಂಬಂಧಿಸಿದ ಸಭೆಯನ್ನು ನಡೆಸಿ ನಿರ್ಣಯ ತೆಗೆದುಕೊಳ್ಳುವುದು ಮತ್ತು ಸ್ಥಳೀಯ ಬೇಡಿಕೆಯನ್ನು ಪೂರೈಸುವುದು ನನ್ನ ಆದ್ಯ ಕರ್ತವ್ಯವಾಗಿರುತ್ತದೆ.
- ಗ್ರಾಮ ಪಂಚಾಯಿತಿಯಲ್ಲಿ ಎಲ್ಲಾ ದಾಖಲೆಗಳನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ನಿರ್ವಹಿಸಿದ್ದು, ನಂತರ ನನ್ನ ಪರಿಶೀಲನೆಗಾಗಿ ಕಳುಹಿಸಿರುತ್ತಾರೆ. ನಾನು ಆಡಳಿತಾತ್ಮಕ ಮತ್ತು ತಾಂತ್ರಿಕ ಪರಿಣಿತಿ ಹೊಂದಿರುವುದಿಲ್ಲ. ಆದುದರಿಂದ ಸದರಿ ಆರೋಪದಿಂದ ಮುಕ್ತಗೊಳಿಸಬೇಕೆಂದು ಕೋರಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ, ಶ್ರೀ ಶಶಿಧರ ನಾಯಕ, ಅಧ್ಯಕ್ಷರು ಮತ್ತು ಶ್ರೀಮತಿ ಮಂಗಳ ನಾಯಕ, ಮಾಜಿ ಅಧ್ಯಕ್ಷರು ಶೆಟಗೇರಿ ಗ್ರಾಮ ಪಂಚಾಯಿತಿಯಲ್ಲಿ ಸೇವೆ ಸಲ್ಲಿಸುತಿದ್ದಾಗ ತಮ್ಮ ಅಧಿಕಾರ ಅವಧಿಯಲ್ಲಿ ಎಸಗಿರುವಂತಹ ಆರೋಪಗಳ ಬಗ್ಗೆ ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಕಲಂ 43(ಎ) ಮತ್ತು 48(ಎ) ರನ್ವಯ ಕ್ರಮವಹಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ. ಈ ಕುರಿತು ಪ್ರಾದೇಶಿಕ ಆಯುಕ್ತರು ಬೆಳಗಾವಿ ರವರಿಂದ ವರದಿ ಪಡೆಯಲಾಗಿದ್ದು, ಶ್ರೀಮತಿ ಮಂಗಳ ನಾಯಕ, ಮಾಜಿ ಅಧ್ಯಕ್ಷರು ಇವರ ಅಧಿಕಾರ ಅವಧಿಯಲ್ಲಿ ನಡೆದಂತಹ ಕಾಮಗಾರಿಗಳಿಗೆ ಸರ್ಕಾರಿ ಅಧಿಕಾರಿಗಳು ಜೊತೆಗೆ ಸಾಮೀಲಾಗಿ ಅವ್ಯವಹಾರಗಳಲ್ಲಿ ಭಾಗಿಯಾಗಿದ್ದು, ಅಧಿಕಾರ ದುರುಪಯೋಗಪಡಿಸಿಕೊಂಡಿರುವುದು ಹಾಗೂ ಸರ್ಕಾರಿ ಮಾರ್ಗಸೂಚಿಗಳನ್ನು ಸ್ಪಷ್ಟವಾಗಿ ಉಲ್ಲಂಘಿಸಿರುವುದು ಕಂಡು ಬಂದಿದ್ದು, ಅವರ ಸಮಾಜಾಯಿಸಿಯಲ್ಲಿ ಅವರ ವಿರುದ್ಧದ ಆರೋಪಗಳನ್ನು ತೆಗೆದು ಹಾಕುವಂತಹ ಯಾವುದೇ ದಾಖಲೆಗಳನ್ನು ನೀಡಿರದ ಕಾರಣ ಶ್ರೀಮತಿ ಮಂಗಳ ನಾಯಕ ರವರ ಅಧಿಕಾರದ ಅವಧಿಯಲ್ಲಿ ಅವ್ಯವಹಾರ ನಡೆಸಿರುವುದು ಸಾಬೀತಾಗಿರುತ್ತದೆ ಮತ್ತು ಆ ಸಮಯದಲ್ಲಿ ಕೇವಲ ಅವರು ಅಧ್ಯಕ್ಷ ಸ್ಥಾನವನ್ನು ತೊರೆದಿದ್ದಾರೆ ಎಂಬ ಒಂದೇ ಕಾರಣಕ್ಕಾಗಿ ಸದರಿಯವರನ್ನು ಆರೋಪದಿಂದ ಮುಕ್ತಾ ಮಾಡಲು ಅವಕಾಶವಿಲ್ಲ. ಹಾಗೂ ಶ್ರೀ ಶಶಿಧರ ನಾಯಕ, ಮಾಜಿ ಅಧ್ಯಕ್ಷರು, ಶೆಟಗೇರಿ ಗ್ರಾಮ ಪಂಚಾಯಿತಿರವರ ವಿರುದ್ಧದ ಆರೋಪಗಳು ಸಾಬೀತಾಗಿರುವುದಿಲ್ಲವಾದ್ದರಿಂದ ಇವರನ್ನು ಸದರಿ ಪ್ರಕರಣದ ಆರೋಪದಿಂದ ಮುಕ್ತಗೊಳಿಸಬಹುದು.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) (vi) ರಡಿ ಅವನು ಮಾಜಿ ಅಧ್ಯಕ್ಷ ಅಥವಾ ಮಾಜಿ ಉಪಾಧ್ಯಕ್ಷ ಅಥವಾ ಮಾಜಿ ಸದಸ್ಯನಾಗಿ ದುರ್ನಡತೆ, ಅನುದಾನ ದುರುಪಯೋಗ ಮತ್ತು ಇನ್ನಿತರ ಯಾವುದೇ ಪ್ರಕರಣದಡಿ ಆರೋಪಿತನಾಗಿದ್ದು, ತನಿಖೆಯಲ್ಲಿ ಆರೋಪ ಸಾಬೀತಾದರೆ ತೆಗೆದು ಹಾಕಲು ಅವಕಾಶ ಕಲ್ಪಿಸಲಾಗಿದೆ.

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀಮತಿ ಮಂಗಳ ನಾಯಕ, ಮಾಜಿ ಅಧ್ಯಕ್ಷರು, ಶೆಟಗೇರಿ ಗ್ರಾಮ ಪಂಚಾಯಿತಿ, ಅಂಕೋಲಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ರವರ ಸಮಜಾಯಿಷಿಯನ್ನು ಪರಿಶೀಲಿಸಲಾಗಿ, ಪ್ರಾದೇಶಿಕ ಆಯುಕ್ತರು, ರವರ ವಿಚಾರಣಾ ವರದಿಯನ್ನು ಪರಿಶೀಲಿಸಲಾಗಿದೆ.

ಶ್ರೀಮತಿ ಮಂಗಳ ನಾಯಕ, ಮಾಜಿ ಅಧ್ಯಕ್ಷರು, ಶೆಟಗೇರಿ ಗ್ರಾಮ ಪಂಚಾಯಿತಿ ಇವರ ಮೇಲಿರುವ ಆರೋಪಗಳ ಬಗ್ಗೆ ಸರಿಯಾದ ಸಮಜಾಯಿಷಿ ನೀಡದೆ, ದೂರಿಗೆ ಸಂಬಂಧಿಸಿದ ಪೂರಕ ದಾಖಲೆಗಳನ್ನು ಹಾಜರುಪಡಿಸದ ಕಾರಣ ಸದರಿಯವರ ಲಿಖಿತ ಹೇಳಿಕೆಯನ್ನು ಒಪ್ಪಲು ಸಾಧ್ಯವಿಲ್ಲ. ಈ ಹಿನ್ನೆಲೆಯಲಿ ಶ್ರೀಮತಿ ಮಂಗಳ ನಾಯಕ, ಮಾಜಿ ಅಧ್ಯಕ್ಷರು, ಶೆಟಗೇರಿ ಗ್ರಾಮ ಪಂಚಾಯಿತಿ, ಇವರು ಪ್ರಸ್ತುತ ಸದಸ್ಯರಲ್ಲದ ಕಾರಣ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ)(vi) ರಡಿ ಇವರನ್ನು ಸದರಿ ಅಧಿನಿಯಮದ ಪ್ರಕರಣ 12(ಎಲ್) ರನ್ವಯ ಆರು ವರ್ಷಗಳ ಕಾಲ ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿ ಆದೇಶಿಸಲು ಸರ್ಕಾರವು ನಿರ್ಣಯಿಸಿದೆ.

ಅದರಂತೆ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/38/ಗ್ರಾಪಂಕಾ/2020( ಭಾ-1)</u>**

**<u>ಬೆಂಗಳೂರು, ದಿನಾಂಕ: 02-02-2021</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಶಶಿಧರ ನಾಯಕ, ಮಾಜಿ ಅಧ್ಯಕ್ಷರು, ಶೆಟಗೇರಿ ಗ್ರಾಮ ಪಂಚಾಯಿತಿರವರ ವಿರುದ್ಧದ ಆರೋಪಗಳು ಸಾಬೀತಾಗಿರುವುದಿಲ್ಲವಾದ್ದರಿಂದ ಇವರನ್ನು ಸದರಿ ಪ್ರಕರಣದ ಆರೋಪದಿಂದ ಮುಕ್ತಗೊಳಿಸಲಾಗಿದೆ. ಮುಂದುವರೆದು ಹಿಂದಿನ ಅಧ್ಯಕ್ಷರಾದ ಶ್ರೀಮತಿ ಮಂಗಳ ನಾಯಕ, ಶೆಟಗೇರಿ ಗ್ರಾಮ ಪಂಚಾಯಿತಿ, ಅಂಕೋಲಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) (vi) ಮತ್ತು 12(ಎಲ್) ರಂತೆ ಆರು ವರ್ಷಗಳ ಕಾಲ ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

B. Naveenkumar 02/02/21
(ಬಿ. ನವೀನ್ ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,(ಜಿ.ಪಂ.) (ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

02/02/21

**<u>ಗೆ:</u>**

1. ಮಾನ್ಯ ಉಪಲೋಕಾಯುಕ್ತ-1, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬಹುಮಹಡಿ ಕಟ್ಟಡ, ಬೆಂಗಳೂರು
3. ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ-590002.
4. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಕೆ.ಜಿ.ರಸ್ತೆ, ಗಾಂಧಿನಗರ, ಬೆಂಗಳೂರು.
5. ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗ, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು.
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಉತ್ತರ ಕನ್ನಡ ಜಿಲ್ಲೆ.
7. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಅಂಕೋಲಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.
8. ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಶೆಟಗೇರಿ ಗ್ರಾಮ ಪಂಚಾಯಿತಿ, ಅಂಕೋಲಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.
9. ಸಂಬಂಧಿಸಿದವರಿಗೆ (ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಅಂಕೋಲಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ರವರ ಮುಖಾಂತರ)
10. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.
11. ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.